ಫ್ಯಾಕ್ಸ್ : 080 – 2202 8041 ದೂರವಾಣಿ : 080 – 2202 8032

ಕರ್ನಾಟಕ ಸರ್ಕಾರ

ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ

ವಾರ್ತಾ ಸೌಧ, ಸಂಖ್ಯೆ 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001.

ಸಂಖ್ಯೆ : ವಾಇ : ಉ ನಿ : ಸುಮಪ : 2015–16 ದಿನಾಂಕ: 22-01-2016

## ಪತ್ರಿಕಾ ಆಮಂತ್ರಣ

| ಕ್ರಮ ಸಂಖ್ಯೆ | ಕಾರ್ಯಕ್ರಮಗಳ ವಿವರ | ದಿನಾಂಕ ಸಮಯ | ಕಾರ್ಯಕ್ರಮ ನಡೆಯುವ ಸ್ಥಳ |
|---|---|---|---|
| 1 | ನೇತಾಜಿ ಸುಭಾಷ್ ಚಂದ್ರಬೋಸ್ ಅವರ 119 ನೇ ಜನ್ಮ ದಿನಾಚರಣೆ:<br>ಮಾಲಾರ್ಪಣೆ:<br><br>ಶ್ರೀ ಸಿದ್ದರಾಮಯ್ಯ,<br>ಮುಖ್ಯಮಂತ್ರಿಗಳು, ಕರ್ನಾಟಕ ಸರ್ಕಾರ | 23-1-2016<br>ಶನಿವಾರ<br>ಬೆಳಗ್ಗೆ<br>10-00 ಗಂಟೆಗೆ | ವಿಧಾನ ಸೌಧದ ಪಶ್ಚಿಮ ದಿಕ್ಕಿನಲ್ಲಿರುವ ಸುಭಾಷ್ ಚಂದ್ರಬೋಸ್ ಅವರ ಪ್ರತಿಮೆ ಬಳಿ ಭಾವಚಿತ್ರಕ್ಕೆ ಮಾಲಾರ್ಪಣೆ |
| 2 | ದಕ್ಷಿಣ ಭಾರತ ವಿಜ್ಞಾನ ಮೇಳ:<br><br>ಸಮಾರೋಪ ಮತ್ತು ಬಹುಮಾನ ವಿತರಣೆ:<br><br>ಶ್ಯಾಮನೂರು ಶಿವಶಂಕರಪ್ಪ<br>ತೋಟಗಾರಿಕೆ ಮತ್ತು ಕೃಷಿ ಮಾರುಕಟ್ಟೆ ಸಚಿವರು<br><br>ಮುಖ್ಯ ಅತಿಥಿ:<br><br>ಕೆ. ಅಭಯಚಂದ್ರ,<br>ಕ್ರೀಡಾ ಮತ್ತು ಯುವಜನ ಸೇವಾ ಸಚಿವರು | 23-1-2016<br>ಶನಿವಾರ<br>ಮಧ್ಯಾಹ್ನ<br>3-00 ಗಂಟೆಗೆ | ವಿಶ್ವೇಶ್ವರಯ್ಯ ಕೈಗಾರಿಕಾ ಮತ್ತು ತಾಂತ್ರಿಕ ಮ್ಯೂಸಿಯಂ,<br>ಕಸ್ತೂರಬಾ ರಸ್ತೆ,<br>ಬೆಂಗಳೂರು |

| | | | |
|---|---|---|---|
| ೩ | ಮನೆಯಂಗಳದಲ್ಲಿ ಮಾತುಕತೆ:<br>ತಿಂಗಳ ಅತಿಥಿ:<br>ಮುಖ್ಯಮಂತ್ರಿ ಚಂದ್ರು,<br>ಖ್ಯಾತ ಕಲಾವಿದರು | ೨೩-೧-೨೦೧೬<br>ಶನಿವಾರ<br>ಸಂಜೆ<br>೪-೦೦ ಗಂಟೆಗೆ | ನಯನ ಸಭಾಂಗಣ,<br>ಕನ್ನಡ ಭವನ,<br>ಜೆ.ಸಿ. ರಸ್ತೆ,<br>ಬೆಂಗಳೂರು |

ನಿರ್ದೇಶಕರ ಪರವಾಗಿ

# ಪತ್ರಿಕಾ ಪ್ರಕಟಣೆ

## ಸಚಿವ ಸಂಪುಟ ಸಭೆ

ಬೆಂಗಳೂರು, ಜನವರಿ 22 ( ಕರ್ನಾಟಕ ವಾರ್ತೆ ) :

ರಾಜ್ಯ ಸಚಿವ ಸಂಪುಟದ ಸಭೆಯು ಜನವರಿ 25 ರ ಸೋಮವಾರ ಬೆಳಿಗ್ಗೆ 11-00 ಗಂಟೆಗೆ ವಿಧಾನ ಸೌಧದ ಮೂರನೇ ಮಹಡಿಯಲ್ಲಿರುವ ಸಚಿವ ಸಂಪುಟ ಸಭಾಮಂದಿರದಲ್ಲಿ ನಡೆಯಲಿದೆ.

ಬಾಬು/ಕೆಎಂ

## ದಿ: ದೇವರಾಜ ಅರಸು ಅವರ ಮಾಹಿತಿ ನೀಡಿ

ಬೆಂಗಳೂರು, ಜನವರಿ 22 ( ಕರ್ನಾಟಕ ವಾರ್ತೆ ) :

ಮಾಜಿ ಮುಖ್ಯಮಂತ್ರಿ ದಿವಂಗತ ಡಿ. ದೇವರಾಜ ಅರಸು ಅವರ ಜನ್ಮಶತಮಾನೋತ್ಸವವನ್ನು ರಾಜ್ಯ ಸರ್ಕಾರವು 2016 ರ ಆಗಸ್ಟ್ 20 ರವರೆಗೆ ಆಚರಿಸುತ್ತಿದ್ದು, ಅರಸು ಅವರ ಹೆಸರಿನಲ್ಲಿ ಪುಸ್ತಕಗಳು ಮತ್ತು ಚಿತ್ರಸಂಪುಟಗಳನ್ನು ಹೊರತರಲಾಗುತ್ತಿದೆ. ದಿ: ದೇವರಾಜ ಅರಸು ಅವರ ಅಪರೂಪದ ಛಾಯಾಚಿತ್ರಗಳು, ಇತರೆ ಮಾಹಿತಿ ಸಾರ್ವಜನಿಕರಲ್ಲಿ ಲಭ್ಯವಿದ್ದಲ್ಲಿ ಡಿ. ದೇವರಾಜು ಅರಸು ಜನ್ಮ ಶತಮಾನೋತ್ಸವ ಕಾರ್ಯಕಾರಿ ಸಮಿತಿ, ನಂ. 16, ಡಿ. ದೇವರಾಜ ಅರಸು ಭವನ, ಮೂರನೇ ಮಹಡಿ, ಮಿಲ್ಲರ್ ಟ್ಯಾಂಕ್‌ಬೆಡ್ ಏರಿಯ ವಸಂತನಗರ, ಬೆಂಗಳೂರು -560 052 ಅಥವಾ du100ecc@gmail.com ಗೆ ಮಿಂಚಂಚೆ ಮೂಲಕ ಫೆಬ್ರವರಿ 6 ರೊಳಗೆ ಕಳುಹಿಸಲು ಕೋರಿದೆ.

ಬಾಬು/ಕೆಎಂ

## ಕಟ್ಟಡ ದುರಸ್ತಿ: ಗ್ರಂಥಾಲಯ ಇಲ್ಲ

ಬೆಂಗಳೂರು, ಜನವರಿ 22 ( ಕರ್ನಾಟಕ ವಾರ್ತೆ ) :

ರಾಜ್ಯ ಕೇಂದ್ರ ಗ್ರಂಥಾಲಯ, ಕಬ್ಬನ್ ಉದ್ಯಾನವನ, ಬೆಂಗಳೂರು ಗ್ರಂಥಾಲಯ ಕಟ್ಟಡದ ದುರಸ್ತಿ ಕಾಮಗಾರಿಯನ್ನು ಸಮರ್ಪಕವಾಗಿ ಕೈಗೊಳ್ಳಲು ಹಾಗೂ ಸಾರ್ವಜನಿಕರ ಸುರಕ್ಷತೆ ದೃಷ್ಟಿಯಿಂದ ಸಾರ್ವಜನಿಕರನ್ನು ನಿರ್ಬಂಧಿಸುವುದು ಅಗತ್ಯವಿರುವುದರಿಂದ ಗ್ರಂಥಾಲಯವನ್ನು ದಿನಾಂಕ:27–01–2016 ರಿಂದ 15–03–2016 ರ ವರೆಗೆ ಮುಚ್ಚಲಾಗುತ್ತದೆ.

ಓದುಗರು ಸಮೀಪದಲ್ಲಿರುವ ಸಾರ್ವಜನಿಕ ಗ್ರಂಥಾಲಯಗಳಾದ, ನಗರ ಕೇಂದ್ರ ಗ್ರಂಥಾಲಯ, ಕೇಂದ್ರ ವಲಯ, ಕೆ. ಹೆಚ್. ರಸ್ತೆ, ಬೆಂಗಳೂರು ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಆವರಣದಲ್ಲಿರುವ ಶಾಖಾ ಗ್ರಾಂಥಾಲಯ, ರಿಚ್‌ಮಂಡ್ ಟೌನ್ ಶಾಖಾ ಗ್ರಂಥಾಲಯ, ಗಾಂಧಿ ಭವನ ಶಾಖಾ ಗ್ರಂಥಾಲಯ, ಚಾಮರಾಜಪೇಟೆ ಶಾಖಾ ಗ್ರಂಥಾಲಯ, ಕಬ್ಬನ್ ಪಾರ್ಕ್‌ನಲ್ಲಿರುವ ಇಂದಿರಾ ಪ್ರಿಯದರ್ಶಿನಿ ಮಕ್ಕಳ ಗ್ರಂಥಾಲಯದ ಆವರಣ(ಪತ್ರಿಕಾ ವಿಭಾಗ ಮಾತ್ರ) ಗ್ರಂಥಾಲಯಗಳನ್ನು ಉಪಯೋಗಿಸಬಹುದೆಂದು ಕೋರಿದೆ.

ಬಾಬು/ಪಿಎಸ್ಐ

## ತಾಂತ್ರಿಕ ಶಿಕ್ಷಣ ಇಲಾಖೆಯಡಿ ಬರುವ ಎಲ್ಲಾ ಸಂಸ್ಥೆಗಳಿಗೆ ಮಾನ್ಯತೆ ನೀಡಲು ಕ್ರಿಯಾ ಯೋಜನೆ

ಬೆಂಗಳೂರು, ಜನವರಿ 22 ( ಕರ್ನಾಟಕ ವಾರ್ತೆ ) :

ರಾಜ್ಯದ ತಾಂತ್ರಿಕ ಶಿಕ್ಷಣ ಇಲಾಖೆಯಡಿಯಲ್ಲಿ ಬರುವ ಎಲ್ಲಾ ಸಂಸ್ಥೆಗಳನ್ನು ಮಾನ್ಯತೆಗೊಳಪಡಿಸಲು ಕ್ರಿಯಾ ಯೋಜನೆಯನ್ನು ರೂಪಿಸಿ ಅನುಷ್ಠಾನಗೊಳಿಸಲಾಗುತ್ತಿದೆ. ಅದರಂತೆ ರಾಜ್ಯದ ಆರು ಪ್ರಮುಖ ವಲಯಗಳಾದ ದಾವಣಗೆರೆ, ಹುಬ್ಬಳ್ಳಿ, ಕಲಬುರಗಿ, ಮೈಸೂರು, ಮಂಗಳೂರು ಹಾಗೂ ಬೆಂಗಳೂರು ವಲಯಗಳಲ್ಲಿ ಮಾನ್ಯತೆಗೆ ಸಂಬಂಸಿದ ಸಂವಾದಾತ್ಮಕ ಕಾರ್ಯಾಗಾರವನ್ನು ಸಹ ಹಮ್ಮಿಕೊಳ್ಳಲಾಗಿದೆ.

ಕ್ರಿಯಾಯೋಜನೆಯ ಮುಂದಿನ ಭಾಗವಾಗಿ ತಾಂತ್ರಿಕ ಶಿಕ್ಷಣ ಇಲಾಖೆಯು ಸಂಸ್ಥೆಗಳನ್ನು ಗುರುತಿಸಿ ಮಾನ್ಯತೆಯನ್ನು ಪಡೆಯಲು ಅಗತ್ಯವಿರುವ ಕ್ರಮಗಳನ್ನು ಇಲಾಖೆ ವತಿಯಿಂದ ಕೈಗೊಂಡು, ಪ್ರಾಂಶುಪಾಲರು ಮತ್ತು ಸಿಬ್ಬಂದಿವರ್ಗದವರು ಕಾರ್ಯಪ್ರವೃತ್ತರಾಗಲು ಸೂಚಿಸಲಾಗಿದೆ ಎಂದು ತಾಂತ್ರಿಕ ಶಿಕ್ಷಣ ನಿರ್ದೇಶನಾಲಯದ ನಿರ್ದೇಶಕರು ತಿಳಿಸಿದ್ದಾರೆ.

ಬಾಬು/ಪಿಎಸ್ಐ